


# ಹಲವು ನುಡಿಗಳ ನಡಿಗೆ

## ಕನ್ನಡ ಸಾಹಿತ್ಯ ವಿಮರ್ಶೆಯ ತಾತ್ವಿಕ ಒಳನೋಟಗಳು



ಸಂಪಾದಕರು
ಶಿವಾನಂದ
ಕುಮಾರ ಇಂದ್ರಬೆಟ್ಟ
ವೀರಭದ್ರಯ್ಯ ಹಿರೇಮಠ



**HALAVU NUDIGALA NADIGE:**
Collection of articles Edited by :
**SHIVANANDA**
**KUMARA INDRABETTA**
**VEERABHADHRAIAH HIREMATA**
Research Fellows, Department of Kannada, Bangalore University, Bangalore. Mobile No-7676985533
Published by:
**SAHITHYA SAMBHRAMA PRAKASHANA**
#43, 10th cross, Jnanaganganagara, Bangalore - 56,
Mo. +91 7676985533

| | |
|---|---|
| **First Print** | : 2020 |
| **Cover Page** | : V. M. Manjunath |
| **ISBN** | : 978–81–945252–4–0 |
| **Pages** | : 214 |
| **Rights** | : Author |
| **Price** | : 200/- |
| **Size** | : 1/8 Demmy |
| **Paper** | : 70 GSM |
| **Print** | : Sneha Printers, Bangalore |

ಪ್ರಕಾಶಕರು:
ಸಾಹಿತ್ಯ ಸಂಭ್ರಮ ಪ್ರಕಾಶನ
#43, 10ನೇ ಅಡ್ಡರಸ್ತೆ, ಜ್ಞಾನಗಂಗಾನಗರ, ಜ್ಞಾನಭಾರತಿ ಅಂಚೆ,
ಬೆಂಗಳೂರು–560056, Mo. +91 7676985533

| | |
|---|---|
| ಪ್ರಥಮ ಮುದ್ರಣ | : 2020 |
| ಮುಖಪುಟ | : ವಿ. ಎಂ. ಮಂಜುನಾಥ್ |
| ಐಎಸ್‌ಬಿಎನ್ | : 978–81–945252–4–0 |
| ಪುಟಗಳು | : 214 |
| ಹಕ್ಕು | : ಲೇಖಕರು |
| ಬೆಲೆ | : ರೂ. 200/– |
| ಪುಸ್ತಕದ ಅಳತೆ | : 1/8 ಡೆಮ್ಮಿ |
| ಕಾಗದ | : 70 ಜಿ.ಎಸ್.ಎಂ. |

# ಪರಿವಿಡಿ


- ಸಂಪಾದಕರ ಮಾತು
- ಕಲಬುರಗಿ ಜಿಲ್ಲೆಯ ಹೊಲೆಮಾದಿಗರ ಸಾಂಸ್ಕೃತಿಕ ಜಾನಪದ ಕಲೆ ಮತ್ತು ಸಾಹಿತ್ಯ / 9
  – ಶ್ರೀ ಶಿವಾನಂದ
- ಸಾಂಸ್ಕೃತಿಕ ನಾಯಕರು: ಸಮುದಾಯಗಳ ಒಗ್ಗೂಡುವಿಕೆಯೋ ಛಿದ್ರೀಕರಣವೋ / 15
  – ಕುಮಾರ ಇಂದ್ರಬೆಟ್ಟ
- ಜರಗನಹಳ್ಳಿ ಶಿವಶಂಕರ್ ಅವರ ಹನಿಗವಿತೆಗಳಲ್ಲಿ ಪ್ರಕೃತಿ /19
  – ಶ್ರೀ. ವೀರಭದ್ರಯ್ಯ ಹಿರೇಮಠ.
- ಜಾತಿ ಮತ್ತು ಜೀತಪದ್ಧತಿಯ ಮುಕ್ತಿಗಾಗಿ ಹೋರಾಟ:ಬೆಲ್ಲದ ದೋಣಿ / 24
  – ರಾಕೇಶ್‌ಶರ್ಮ ಕೆ.ವಿ.
- ವಚನ ಸಾಹಿತ್ಯದ ಚಾರಿತ್ರಿಕ ಬೆಳವಣಿಗೆ / 38
  – ಪ್ರೊ.ರೇಣುಕಮ್ಮ. ಜೆ
- ವ್ಯಾಸರಾಯ ಬಲ್ಲಾಳರ ದೃಷ್ಟಿಯಲ್ಲಿ ಸ್ತ್ರೀ / 45
  – ಡಾ. ಸಿ. ಎಸ್.ಪ್ರಕಾಶ
- ಅರ್ಥಶೂನ್ಯ ಮತ್ತು ಅಸತ್ಯ ವಚನಗಳ ವಿವೇಚನೆ / 52
  – ಡಾ. ಸಿ.ಟಿ. ಜಯಣ್ಣ
- ಸಿದ್ಧರಾಮನ ಎಲ್ಲಾ ಪವಾಡಗಳ ಹಿಂದಿರುವ ಮನೋಧರ್ಮ/57
  – ಲೋಹಿತ್.ಪಿ
- ಸೇವಾಲಾಲ ಕುರಿತ ಜನಪದ ಸಾಹಿತ್ಯದಲ್ಲಿ ನರೂಪಿತವಾದ ತಾತ್ವಿಕ ವಿವೇಚನೆ / 67
  – ಶ್ರೀ ಎಸ್. ಬಿ. ಜಾಧವ
- ಶರಣರ ವಚನಗಳಲ್ಲಿ ಸಾಮಾಜಿಕ ನಲುಗಳು / 75
  – ಶ್ರೀ. ಕುಮಾರ್ ಎಸ್.
- ಸ್ತ್ರೀವಾದಿ ಸಂಶೋಧನೆ: ಸ್ತ್ರೀವಾದ ಮತ್ತು ದಲಿತ ಸ್ತ್ರೀವಾದ/83
  – ದಿನೇಶ್ ಹೆಚ್

# ಅರ್ಥಶೂನ್ಯ ಮತ್ತು ಅಸತ್ಯ ವಚನಗಳ ವಿವೇಚನೆ

**ಡಾ. ಸಿ.ಟಿ.ಜಯಣ್ಣ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಜೆ.ಎಮ್.
ಮಹಿಳಾ ಕಾಲೇಜು, ಚಿತ್ರದುರ್ಗ-577 501

ವಚನ ಸಾಹಿತ್ಯ ಹಿರಿಮೆ-ಗರಿಮೆಗಳನ್ನು ಕುರಿತು ವಿದ್ವಾಂಸರು ಸಾಕಷ್ಟು ಬಣ್ಣಿಸಿ ಲೇಖನಗಳನ್ನು, ಗ್ರಂಥಗಳನ್ನು ಬರೆದಿದ್ದಾರೆ. ಆದರೆ ಅವುಗಳ ಶುದ್ಧೀಕರಣ ಕುರಿತು ಡಾ. ಆರ್.ಸಿ. ಹಿರೇಮಠ, ಪ್ರೊ. ಶಿ.ಶಿ. ಬಸವನಾಳ, ಪ್ರೊ. ಎಂ.ಆರ್.ಶ್ರೀ ಮುಂತಾದ ಬೆರಳೆಣಿಕೆಯಷ್ಟು ವಿದ್ವಾಂಸರು ಕಳೆದ ಒಂದು ಶತಮಾನದಲ್ಲಿ ಮಾತ್ರ ಗೋಚರಿಸುತ್ತಾರೆ. ಇವರ ಈ ಶುದ್ಧೀಕರಣ ಕಾರ್ಯಕ್ಕೆ ವಚನ ಪಿತಾಮಹ ಫ.ಗು. ಹಳಕಟ್ಟಿ ಅವರು ಒಬ್ಬಂಟಿಯಾಗಿ ಬಡತನವನ್ನೇ ಹಾಸಿ, ಬಡತನವನ್ನೇ ಹೊದ್ದುಕೊಂಡು ಅಪರಿಮಿತ (ಅವಿರತ) ಶ್ರಮವಹಿಸಿ ವಚನ ಸಾಹಿತ್ಯವನ್ನು ಪ್ರಕಟಿಸಿ ಪಂಡಿತರ ಗಮನಕ್ಕೆ ತಂದರು. ಅವರ ವಚನಗಳನ್ನು ಮೂಲಾಧಾರವಾಗಿಟ್ಟುಕೊಂಡು ಮತ್ತಷ್ಟು ವಚನ ಕಟ್ಟುಗಳನ್ನು ಸಂಗ್ರಹಿಸಿ ಹತ್ತೆಂಟು ಪಂಡಿತರೊಂದಿಗೆ ಆ ತಾಳೆಗ್ರಂಥ, ಹಸ್ತಪ್ರತಿಗಳಲ್ಲಿಯ ವಚನಗಳನ್ನು ಒಂದೊಂದಾಗಿ ಎತ್ತಿಕೊಂಡು ಶುದ್ಧವಾಗಿರಬಹುದಾದುದನ್ನು ಸ್ವೀಕರಿಸಿ ಇತರ ಭಿನ್ನವೆನಿಸಿದ ಶಬ್ದಗಳನ್ನು ಅದರ ಅಡಿಯಲ್ಲಿ ಪಾಠಾಂತರಗಳನ್ನಾಗಿ ಲಿಖಿಸುತ್ತ ಹೋದರು. ಅವರ ಶುದ್ಧೀಕರಣ ಕಾರ್ಯವು ಮೆಚ್ಚುವಂಥದ್ದು. ತಾವು ಶುದ್ಧೀಕರಿಸಿದ ವಚನ ಸಂಪುಟಗಳನ್ನು ಪಾಠಾಂತರಗಳೊಂದಿಗೆ ಪ್ರಕಟಿಸಿದರು. ಜನಮನ್ನಣೆಗೆ ಅವು ಪಾತ್ರವಾದವು. ಜನಪ್ರಿಯವಾದವು. ಮಾರಾಟವಾದವು. ಆದರೆ ಜನರ ಬೇಡಿಕೆ ಅಧಿಕವಾಯಿತು. ಆಗ ಅವೆಲ್ಲವುಗಳನ್ನು 14 ಸಂಪುಟಗಳಲ್ಲಿ ಕ್ರೋಢೀಕರಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನ ಸಹಾಯದಿಂದ ಪ್ರಕಟಿಸಲಾಯಿತು.

ಆದರೆ, ಇವು ಜನಪ್ರಿಯ ವಚನ ಸಂಪುಟಗಳೆಂಬ ಕಾರಣದಿಂದ ಅವುಗಳಲ್ಲಿಯ



ಪಾಠಾಂತರಗಳನ್ನು ತೆಗೆದು ಹಾಕಲಾಯಿತು. ಹಳೆಗನ್ನಡದ ' ' ಮತ್ತು ' ' ಅಕ್ಷರಗಳನ್ನೆಲ್ಲಾ ತೆಗೆದು ಹಾಕಿ ಅವುಗಳ ಬದಲಾಗಿ 'ರ' ಮತ್ತು 'ಳ' ಮುದ್ರಿಸಲಾಯಿತು. ಇದರಿಂದ ವಚನಗಳು ಪುನಃ ಮೊದಲಿನಂತೆ ದೋಷ ಪೂರಿತವಾದವು. ಅವುಗಳನ್ನು ಮತ್ತೊಮ್ಮೆ ಶುದ್ಧೀಕರಿಸುವುದು ಕರಕಷ್ಟ ಆದರೂ ವಚನಗಳು ದೋಷಯುಕ್ತವಾಗಿವೆ ಎಂದು ಹೇಳಿ ಸುಮ್ಮನಾಗುವುದರಿಂದ ದೋಷಮುಕ್ತವಾಗುವುದು ಸಾಧ್ಯವಿಲ್ಲ. ಆದ್ದರಿಂದ ಅಧಿಕ ಶ್ರಮವಾದರೂ ಅವುಗಳನ್ನು ಪರಿಶುದ್ಧಗೊಳಿಸಲೇಬೆಂಕೆಂಬುದು ನಮ್ಮ ಅಂತರಾಳದ ಅಪೇಕ್ಷೆ. ಅಂತೆಯೇ ನಾವು ವಚನಾಭ್ಯಾಸದಲ್ಲಿರುವಾಗ ನಮ್ಮ ದೃಷ್ಟಿ ಗೋಚರವಾದ ಅನೇಕ ತಪ್ಪುಗಳನ್ನೂ ಎತ್ತಿ ತೋರಿಸಿ ಕೆಲವು ಮಾರ್ಗದರ್ಶಿ ಲೇಖನಗಳನ್ನು ಗ್ರಂಥರೂಪದಲ್ಲಿ ಬರೆದು ಪ್ರಕಟಿಸಿದ್ದೇವೆ. ಅವುಗಳನ್ನು ಸಂಪಾದಕರು ಸಹೃದಯತೆಯಿಂದ ಗಮನಿಸಿ, ಮುಂದಿನ ಮೂರನೆಯ ಆವೃತ್ತಿಯಲ್ಲಿ ಸರಿಪಡಿಸಿಕೊಳ್ಳಬೇಕು. ಆದರೆ, ವಚನ ಸಂಪುಟಗಳನ್ನು ಚೆನ್ನಾಗಿ ಓದಿ, ವಚನಗಳನ್ನು ತೀಕ್ಷ್ಣ ದೃಷ್ಟಿಯಿಂದ ಪರಿಶೀಲಿಸಿ, ಕಂಡುಬಂದ ತಪ್ಪುಗಳನ್ನು ಆಯಾ ಸಂಪುಟದ ಸಂಪಾದಕರು ತಿದ್ದಿ ಸರಿಪಡಿಸಬೇಕು. ಸಧ್ಯದ ಪರಿಸ್ಥಿತಿಯಲ್ಲಿ ಶುದ್ಧೀಕರಣ ಕಾರ್ಯ ಅದೆಷ್ಟರ ಮಟ್ಟಿಗೆ ಸಾಧ್ಯವಾಗುತ್ತದೆಂಬುದನ್ನು ಕಾಯ್ದು ನೋಡಬೇಕು.

"ಹನ್ನೆರಡನೆಯ ಶತಮಾನದಲ್ಲಿ ರಚಿತವಾದ ವಚನಗಳು ಓದುಗರಿಗೆ, ಕೇಳುಗರಿಗೆ ಅನೇಕ ರೀತಿಯಲ್ಲಿ ಪ್ರಯೋಜನಕಾರಿಯಾಗಿದ್ದವು. ಕೊನೆಯ ಪಕ್ಷ ಅವು ಅರ್ಥಪೂರ್ಣವಾಗಿದ್ದವು. ಆದರೆ ಅನಂತರದವರು ಬರೆದ ವಚನಗಳಲ್ಲಿ ಕೆಲವು ಯಾವ ರೀತಿಯಲ್ಲೂ ಪ್ರಯೋಜನಕಾರಿಯೆನಿಸುವುದಿಲ್ಲ. ಕೆಲವು ವಚನಕಾರರು (ಉದಾ: ಬಸವಣ್ಣ, ಚೆನ್ನಬಸವಣ್ಣ) ಬರೆದ ವಚನಗಳನ್ನೇ ಅಲ್ಲೊಂದು ಪದ ಇಲ್ಲೊಂದು ಪದ ಬದಲಿಸಿ, ತಮ್ಮ ಅಂಕಿತ ಹಾಕಿ ಪುನರಾವರ್ತನೆ ಮಾಡಿದ್ದಾರೆ. ಇವೂ ಸಹ ಒಂದರ್ಥದಲ್ಲಿ ನಿಷ್ಪ್ರಯೋಜಕ ವೆನಿಸಿದರೂ ಅಲ್ಲಿ ಪ್ರಸ್ತಾಪಿಸುತ್ತಿರುವುದು ಅಂಥ ಪುನರಾವರ್ತಿತ ವಚನಗಳನ್ನಲ್ಲ. ಬೇರೆ ರೀತಿಯ ನಿಷ್ಪ್ರಯೋಜಕ ವಚನಗಳನ್ನು ಅವುಗಳನ್ನು ನಾವು (1) ಅರ್ಥಶೂನ್ಯ ಮತ್ತು (2) ಅಸತ್ಯ ಎಂದು ಎರಡು ಗುಂಪುಗಳನ್ನಾಗಿ ವಿಂಗಡಿಸಿದ್ದೇವೆ".

ಸಮಗ್ರ ವಚನ ಸಂಪುಟ 13ರ ರಲ್ಲಿ 3ನೇ ವಚನದಿಂದ 224ನೆಯ ವಚನಗಳಲ್ಲಿ ವಿವರಿಸಿದ 'ಭವನಗಳ' ವರ್ಣನೆ ಅರ್ಥಶೂನ್ಯ, ನಿರುಪಯುಕ್ತವೆಂದು ಪ್ರೊ. ಮಹದೇವಪ್ಪನವರು ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ. ಈ ವಚನಗಳು ಬಸವಾದಿ ಶರಣರ ಆಶಯಕ್ಕೆ ಅತ್ಯಂತ ವಿರೋಧವಾಗಿವೆ. ಅಲ್ಲದೆ, ಇಂಥ ಖೊಟ್ಟಿ ವಚನಗಳನ್ನು ಸಂಪುಟದ ಸಂಪಾದಕರು ಚರ್ಚಿಸಿ ತೆಗೆದು ಹಾಕುವುದು

## ಪರಾಮರ್ಶನ ಗ್ರಂಥಗಳು


ಅಲ್ಲಮನ ವಚನಗಳು – ಎಲ್. ಬಸವರಾಜು

ಅಕ್ಕನ ವಚನಗಳು – ಸಾ.ಶಿ. ಮರುಳಯ್ಯ

ಪ್ರಭುದೇವರ ಶೂನ್ಯಸಂಪಾದನೆ – ಎಲ್. ಬಸವರಾಜು

ವಚನ ಸಾಹಿತ್ಯ – ಎಂ. ಚಿದಾನಂದಮೂರ್ತಿ

ವಚನ ಮಾರ್ಗ – ಎಂ.ಎಂ. ಕಲಬುರ್ಗಿ

ಸಾಹಿತ್ಯದಲ್ಲಿ ಸ್ತ್ರೀವಾದ – ವೀಣಾ ಶಾಂತೇಶ್ವರ್

ವಚನ ಸಾಹಿತ್ಯ ಮತ್ತು ಮಹಿಳೆ – ಶೆಲಜಾ ಉಡಚಣ

ಮಹಾಲಿಂಗೇಂದ್ರ ವಿಜಯ – ಸಂ.ಎಲ್. ಬಸವರಾಜು

ಶಿವಗಣ ಪ್ರಸಾದಿ ಮಹದೇವಯ್ಯ ದೇವರುಸೇರಿಸಿದ ಶೂನ್ಯಸಂಪಾದನೆ – ಸಂ.ಎಲ್ ಬಸವ

ಇಮ್ಮಡಿ ಮುರಿಗಾ ಗುರುಸಿದ್ದ ಸ್ವಾಮಿಗಳ ಕೃತಿಗಳು – ಸಂ.ಎಸ್ ವಿದ್ಯಾಶಂಕರ್

ಮುರುಘಾ ಪರಂಪರೆಯ ಪ್ರಾಚೀನ ಸಾಹಿತ್ಯ – ಡಾ.ಪುಷ್ಪಾಬಸನಗೌಡರ

ಮುರಿಗಾ ಶಾಂತವೀರ ಸ್ವಾಮಿಗಳ ಕೃತಿಗಳು – ಸಂ. ಎಸ್.ಶಿವಣ್ಣ

ಚಿನ್ಮೂಲಾದ್ರಿ ಚೇತನ – ಸಂ.ಇ.ಶಿವಕುಮಾರ್


••